**ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 4514/2021 ಸಿ.ಡಬ್ಲ್ಯೂ –09 ಪಿ.ಡಬ್ಲ್ಯೂ -05

| | | |
|---|---|---|
| ಹೆಸರು | ಃ | ಚಿತ್ತಪ್ಪ |
| ತಂದೆಃ ಗಂಡ | ಃ | ರೇವಣಪ್ಪ |
| ವಯಸ್ಸು | ಃ | ೪೫ ವರ್ಷ |
| ಉದ್ಯೋಗ | : | ಕೂಲಿಕೆಲಸ |
| ವಾಸಸ್ಥಳ | ಃ | ಕೊಡಲಹಂಗರಗಾ |

ದಿನಾಂಕಃ೦೨.೦೧.೨೦೨೪

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ ಅವರಿಂದ ಃ**

ಆರೋಪಿ ಪರಿಚಯ ಇರುತ್ತದೆ. ಚಾಸಾ-1 ರಿಂದ 8, 10 ರಿಂದ 13 ರವರ ಪರಿಚಯ ಇರುತ್ತದೆ. ಮೃತ ಅವ್ವಮ್ಮ ನನ್ನ ಅಕ್ಕನಾಗಬೇಕು, ಈಗ ಅವರು ಅಪಘಾತದಲ್ಲಿ ತೀರಿಕೊಂಡಿರುತ್ತಾರೆ. ಸದರಿ ಅವ್ವಮ್ಮ ಅವರು ಬಹಿರ್ದೆಸೆಗೆ ಹೋದಾಗ ರಸ್ತೆಯ ತಡೆಗಳ ಪಕ್ಕದಲ್ಲಿ ಹೊಗಿ ಕುಳಿತಾಗ ಕಾರ ವಾಹನ ಬಂದು ಅಪಘಾತಪಡಿಸಿರುತ್ತದೆ, ಆಗ ನಾವು ಮನೆಯಲ್ಲಿದ್ದೆವು, ವಿಷಯ ತಿಳಿದು ಹೋಗಿ ನೋಡಲಾಗಿ ಅವರು ಸ್ಥಳದಲ್ಲಿಯೇ ತೀರಿಕೊಂಡಿರುತ್ತಾಳೆ. ಸದರಿ ವಾಹನವನ್ನು ಮತ್ತು ಅದರ ಚಾಲಕನನ್ನು ನನಗೆ ಗುರುತಿಸಲು ಆಗುವುದಿಲ್ಲ. ಮೃತ ದೇಹವನ್ನು ನಾವು ಆಸ್ಪತ್ರೆಗೆ ತೆಗೆದುಕೊಂಡು ಬಂದಿರುತ್ತೇವೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ದಿ.16.11.2020 ರಂದು 6.00 ಗಂಟೆ ಸುಮಾರಿಗೆ ನಾನು ಚಾಸಾ-7, 8 ಎಲ್ಲರೂ ಮಾತನಾಡುತ್ತಾ ನಮ್ಮೂರಿನಿಂದ ಕಲಬುರಗಿಗೆ ಕಡೆಗೆ ಹೋಗುವ ಮುಖ್ಯ ರಸ್ತೆ ಪಕ್ಕದಲ್ಲಿ ರೋಡ್ ಹಂಪ್ಸ ಹತ್ತಿರ ನಿಂತಿರುವಾಗ ಆಳಂದ ಕಡೆಯಿಂದ ಒಬ್ಬ ಚಾಲಕನು ತನ್ನ ವಾಹವನ್ನು ಅತಿ ಜೋರಾಗಿ ನಿರ್ಲಕ್ಷತನದಿಂದ ನಡೆಸಿಕೊಂಡು ಬಂದು ಅಪಘಾತಪಡಿಸಿರುತ್ತಾನೆ ಎಂದರೆ ಸಾಕ್ಷಿಯು ನಾನು ಎಲ್ಲ ಜನರು ಸೇರಿದ ನಂತರ ಹೋಗಿರುತ್ತೆನೆ ಎಂದು ನುಡಿಯುತ್ತಾರೆ. ಸದರಿ ಅಪಘಾತದಿಂದ ಅವಮ್ಮಳಿಗೆ ತಲೆಗೆ, ಚಪ್ಪೆಗೆ, ಕೈಗೆ, ಬಲ ಹುಬ್ಬಿಗೆ, ಎಡಕಿವಿಯ ಹತ್ತಿರ, ಎಡಗೈ ಮುಂಗೈಗೆ, ಎದೆಗೆ, ಹೊಟ್ಟೆಗೆ ತೀವ್ರ ಸ್ವರೂಪದ ಗಾಯಗಳಾಗಿದ್ದವು ಎಂದರೆ ಸರಿ. ಸದರಿ ಅಪಘಾತಪಡಿಸಿದ ವಾಹನ ನಂ. ಕೆ.ಎ 05-ಎಂ.ಸಿ.-0130 ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ವಾಹನವನ್ನು ಚಲಾಯಿಸಿಕೊಂಡು ಬಂದ ವ್ಯಕ್ತಿ ರಾಹುಲ ತಂದೆ ಪದ್ಮಕುಮಾರ ಏಂದು ಗೊತ್ತಾಯಿತು ಎಂದರೆ ಸರಿ ಅಲ್ಲ. ಸದರಿ ಅಪಘಾತದಲ್ಲಿ ವಾಹನ ಚಾಲಕನಿಗೆ ಎದೆಗೆ, ಬಲಕಿವಿಯ ಪಕ್ಕದಲ್ಲಿ ರಕ್ತಗಾಯ ಮತ್ತು ಮೈಮೇಲೆ ಸಣ್ಣ

ಪುಟ್ಟ ಗಾಯಗಳಾಗಿದ್ದವು ಎಂದರೆ ಸರಿ ಅಲ್ಲ. ಚಾಸಾ-೬ ರವರಿಗೂ ಕೂಡ ಮುಖದ ಮೇಲೆ ಗುಪ್ತಗಾಯಗಳಾಗಿದ್ದವು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಪೋಲಿಸರಿಗೆ ದಿ.17.11.2021 ರಂದು ಹೇಳಿಕೆ ನೀಡಿರುತ್ತೇನೆ ಎಂಧರೆ ಸರಿ.

**ಪಾಟೀ ಸವಾಲು ಆರೋಪಿ ಪರ ಶ್ರೀ ಆರ್.ಜೆ.ಪಿ. ವಕೀಲರಿಂದ**

ಘಟನಾ ಸಮಯದಲ್ಲಿ ನಾನು ಮನೆಯಲ್ಲಿದ್ದೆನು. ಅಲ್ಲಿ ಜನರು ಕೂಡಿದ್ದನ್ನು ನೋಡಿ ಓಡಿ ಬಂದಿರುತ್ತೇನೆ. ನಾನು ಅಲ್ಲಿ ಹೋದಾಗ ಸಮಯ ೬.೩೦ ರಿಂದ ೭.೦೦ ಗಂಟೆ ಆಗಿತ್ತು. ಕೊಡಲ ಹಂಗರಗಾ ಬಸ್ ನಿಲ್ದಾಣವಿದೆ, ಅಲ್ಲಿ ಹೋಟೆಲಗಳಿವೆ, ಅಲ್ಲಿ ಸಾಕಷ್ಟು ಜನರು ಇರುತ್ತಾರೆ ಎಂದರೆ ಸರಿ. ಕೊಡಲ ಹಂಗರಗಾ ಬಸ್ ನಿಲ್ದಾಣದ ಎರಡೂ ಪಕ್ಕದಲ್ಲಿ ರಸ್ತೆ ತಡೆಗಳಿವೆ ಎಂದರೆ ಸರಿ. ರಸ್ತೆಯ ಎರಡೂ ಪಕ್ಕದಲ್ಲಿ ತಗ್ಗು ಇವೆ ಎಂದರೆ ಸರಿ. ಬಸ್ ನಿಲ್ದಾಣ ಮತ್ತು ರಸ್ತೆ ತಡೆಗಳಿವೆ ಮತ್ತು ಸಾಕಷ್ಟು ಜನರು ಇರುತ್ತಾರೆ ಎಂದು ಎಲ್ಲಾ ವಾಹನಗಳು ನಿಧಾನವಾಗಿ ಹೋಗುತ್ತವೆ ಎಂದರೆ ಸರಿ. ಮೃತ ಅವ್ವಮ್ಮ ಹೃದಯಾಘಾತದಿಂದ ತೀರಿಕೊಂಡಿರುತ್ತಾಳೆ ಎಂಧರೆ ಸರಿ ಅಲ್ಲ. ನಾನು, ಚಾಸಾ-೧ ಸೇರಿ ಖೊಟ್ಟಿ ಪ್ರಕರಣವನ್ನು ದಾಖಲಿಸಿರುತ್ತೇವೆ ಎಂಧರೆ ಸರಿ ಅಲ್ಲ. ಅಪಘಾತ ಪರಿಹಾರ ಕೋರಿ ಮೃತ ಅವ್ವಮ್ಮಳ ಸಂಬಂಧಿಕರು ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಮೃತ ಅವ್ವಮ್ಮ ನನ್ನ ಅಕ್ಕಳಾಗಬೇಕಾದ ಕಾರಣ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂಧರೆ ಸರಿ ಅಲ್ಲ. ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿ ಅಲ್ಲ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ

**ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 4514/2021 ಸಿ.ಡಬ್ಲ್ಯೂ –06 ಪಿ.ಡಬ್ಲ್ಯೂ -04

| | | |
|---|---|---|
| ಹೆಸರು | ಃ | ಸುರೇಂದ್ರಕುಮಾರ |
| ತಂದೆಃ ಗಂಡ | ಃ | ಶಂಕರರಾವ ಸುಲೇಪೇಟ |
| ವಯಸ್ಸು | ಃ | ೪೨ ವರ್ಷ |
| ಉದ್ಯೋಗ | : | ಸರಕಾರಿ ನೌಕರ |
| ವಾಸಸ್ಥಳ | ಃ | ಕಲಬುರಗಿ |

ದಿನಾಂಕಃ೦೨.೦೧.೨೦೨೪

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ ಅವರಿಂದ ಃ**

ಆರೋಪಿ ಪರಿಚಯ ಇರುವುದಿಲ್ಲ. ಚಾಸಾ-1 ರಿಂದ 5, 7 ರಿಂದ 13 ರವರ ಪರಿಚಯ ಇರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ನಾನು ವಾಹನದ ಮಾಲೀಕನಿರುತ್ತೇನೆ, ವಾಹನವನ್ನು ಬಿಡಿಸಿಕೊಂಡು ಹೋಗಿರುತ್ತೇನೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ಈಗ ಓದಿ ಹೇಳಿದ ಹಾಗೆ ನಾನು ಪೋಲಿಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ ಅಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಸಾಕ್ಷಿ ಹೇಳಿಕೆಗೆ ವ್ಯತಿರಿಕ್ತವಾಗೆ ನುಡಿದ ಕಾರಣ ಸದರಿ ಹೇಳಿಕೆಯನ್ನು ನಿಪಿ-೦೪ ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿ ಪ**ರ ಶ್ರೀ ಆರ್.ಜೆ.ಪಿ. **ವಕೀಲರಿಂದ**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿದ್ದರಿಂದ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ